# ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

# DEPARTMENT OF STATE EDUCATION RESEARCH AND TRAINING

ಡಿ ಎಸ್ ಇ ಆರ್ ಟಿ
DSERT

NO 4, 100 FT RING ROAD, BANASHANKARI 3RD STAGE
Bangalore-85

E MAIL:dpi.dsert@gmail.com , http://dsert.kar.nic.in

TEL NO: 26422372
26422373
26422374
FAX NO:26422377


ಸಂಖ್ಯೆ: ಇಟಿಸಿ4/ಎಜು.ರೇ.ಕಾ/25/2009-10/2011-12

ದಿನಾಂಕ: 31/05/2011

ವಿಷಯ: ಬಾನುಲಿ ಹಾಗೂ ಎಜುಸ್ಯಾಟ್ ವಾರ್ಷಿಕ ವೇಳಾಪಟ್ಟಿ ಮುದ್ರಣ ಮತ್ತು ಸರಬರಾಜು ಕಾರ್ಯಕ್ಕಾಗಿ ದರಪಟ್ಟಿ ಆಹ್ವಾನಿಸಿದೆ.

2011-12ನೇ ಸಾಲಿಗೆ ಬಾನುಲಿ ಹಾಗೂ ಎಜುಸ್ಯಾಟ್ ವಾರ್ಷಿಕ ವೇಳಾಪಟ್ಟಿ ಮುದ್ರಿಸಿ ರಾಜ್ಯದ ಎಲ್ಲಾ 202 ಬಿ ಆರ್ ಸಿ ಕಛೇರಿಗಳಿಗೆ ಬ್ಲಾಕ್‌ವಾರು ಬಂಡಲ್ ಮಾಡಿ ನಿಗದಿತ ಸಮಯದಲ್ಲಿ ಸರಬರಾಜು ಮಾಡಬೇಕಾಗಿರುತ್ತದೆ. ಬಾನುಲಿ ವೇಳಾಪಟ್ಟಿ ಅಂದಾಜು 28+4 ಪುಟಗಳನ್ನು ಒಳಗೊಂಡಿರುತ್ತದೆ ಹಾಗೂ ಬಾನುಲಿ ಮತ್ತು ಎಜುಸ್ಯಾಟ್ ವೇಳಾಪಟ್ಟಿ ಅಂದಾಜು 42+4 ಪುಟ 3100 ಪ್ರತಿಗಳನ್ನು ಮುದ್ರಿಸಬೇಕಾಗಿರುತ್ತದೆ. ಬಾನುಲಿ ಮತ್ತು ಎಜುಸ್ಯಾಟ್ ಮುದ್ರಿಸಿದ ವೇಳಾಪಟ್ಟಿಗಳನ್ನು ಚಾಮರಾಜನಗರ, ಗುಲ್ಬರ್ಗಾ, ಯಾದಗಿರ್, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ ಬಿ ಆರ್ ಸಿ ಕಛೇರಿಗಳಿಗೆ ನಿರ್ದಿಷ್ಟ ಪಡಿಸಿದ ಸಂಖ್ಯೆಯ ಪ್ರತಿಗಳನ್ನು ಬ್ಲಾಕ್‌ವಾರು ಬಂಡಲ್‌ಗಳನ್ನು ಮಾಡಿ ಸರಬರಾಜು ಮಾಡಬೇಕಾಗಿರುತ್ತದೆ ಹಾಗೂ 54900 ಬಾನುಲಿ ವೇಳಾಪಟ್ಟಿಗಳನ್ನು 28 ಜಿಲ್ಲೆಗಳಲ್ಲಿನ ಎಲ್ಲಾ ಬಿ.ಆರ್.ಸಿ ಕಛೇರಿಗಳಿಗೆ (ಸರಬರಾಜು ಮಾಡಬೇಕಾದ ಬ್ಲಾಕ್‌ವಾರು ಕಛೇರಿಗಳ ವಿಳಾಸವನ್ನು ಅನುಬಂಧದಲ್ಲಿ ಕಾರ್ಯಾದೇಶದೊಂದಿಗೆ ನೀಡಲಾಗುವುದು.)ಮುದ್ರಿಸಿ ಸರಬರಾಜು ಮಾಡಲು ಪ್ರತಿ ಪುಟಕ್ಕೆ ತಗಲುವ ದರವನ್ನು ಎಲ್ಲಾ ತೆರಿಗೆಗಳು ಸೇರಿದಂತೆ ಇಚ್ಛೆಯುಳ್ಳ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದೆ. ಈ ದರಪಟ್ಟಿಯನ್ನು ದಿನಾಂಕ 09/06/2011ರೊಳಗಾಗಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ನಂ.4, 100 ಅಡಿ ವರ್ತುಲ ರಸ್ತೆ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು-85 ಇವರಿಗೆ ಸೀಲು ಮಾಡಿದ ಲಕೋಟೆಯಲ್ಲಿ ಸಲ್ಲಿಸಲು ತಿಳಿಸಿದೆ.

ಪ್ರತಿಗಳ ಮುದ್ರಣಕ್ಕಾಗಿ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಂಡು ದರಪಟ್ಟಿಯನ್ನು ನೀಡುವುದು.

1. ಮುಖಪುಟ ಮತ್ತು ಹಿಂಬದಿಯ ಪುಟಗಳನ್ನು ಬಹುವರ್ಣದಲ್ಲಿ 170 GSM ಆರ್ಟ್ ಬೋರ್ಡ್ ಡೆಮ್ಮಿ ಕಾಗದದಲ್ಲಿ ಮುದ್ರಣಕ್ಕೆ ಪ್ರತಿ ಪುಟಕ್ಕೆ ತಗಲುವ ದರ.
2. ಒಳಪುಟಗಳನ್ನು ಏಕ ವರ್ಣದಲ್ಲಿ (ಕಪ್ಪು, ಬಿಳುಪು) 1/4th Demmy 60 GSM ಮ್ಯಾಪ್ ಲಿಥೊ ಕಾಗದದಲ್ಲಿ ಮುದ್ರಣಕ್ಕೆ ಪ್ರತಿ ಪುಟಕ್ಕೆ ತಗಲುವ ದರ.

ಷರತ್ತುಗಳು

1. ಒಳಪುಟಗಳನ್ನು 60 GSM ಮ್ಯಾಪ್ ಲಿಥೊ ಕಾಗದದಲ್ಲಿ ಏಕ ವರ್ಣದಲ್ಲಿ (ಕಪ್ಪು, ಬಿಳುಪು) ಮುದ್ರಿಸಬೇಕು.
2. ಕೈಪಿಡಿಗಳನ್ನು Centre pinning ಮಾಡಬೇಕು.
3. ಡಿ.ಟಿ.ಪಿ ಮಾಡಿದ ಅಂತಿಮ ಸಾಮಗ್ರಿಯ Possitive/CD ನೀಡಬೇಕು.
4. ಮುದ್ರಿಸಬೇಕಾದ ಸಾಹಿತ್ಯವನ್ನು ಈ ಕಛೇರಿಯಿಂದ ಒದಗಿಸಲಾಗುವುದು, ಅಂತಿಮವಾಗಿ ಮುದ್ರಣ ಮಾಡುವ ಮೊದಲು ಕನಿಷ್ಠ 3 Proof ಗಳನ್ನು ನೀಡಿ ಅನುಮೋದನೆ ಪಡೆಯುವುದು.
5. ದರಪಟ್ಟಿ ಸಲ್ಲಿಸುವಾಗ KST/CST ನೊಂದಾಯಿಸಿರುವ ಬಗ್ಗೆ ದಾಖಲೆ ನೀಡಬೇಕು.
6. ನಿರ್ವಹಿಸಿದ ಕಾರ್ಯ ತೃಪ್ತಿಕರವಾಗಿದೆ ಎಂದು ಪರಿಶೀಲಿಸಿದ ನಂತರ ಹಣ ಪಾವತಿಸಲಾಗುವುದು. ಯಾವುದೇ ರೀತಿಯ ಮುಂಗಡ ಹಣ ನೀಡಲಾಗುವುದಿಲ್ಲ.
7. ಕಾರ್ಯಾದೇಶ ನೀಡುವ ಕುರಿತು ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.
8. EMD ರೂ. 5ರಷ್ಟು ಬ್ಯಾಂಕ್ ಹುಂಡಿ ರೂಪದಲ್ಲಿ ನೀಡಬೇಕು.

9. ಈ ಮೇಲಿನ ಷರತ್ತುಗಳಿಗೆ ಒಳಪಟ್ಟು ದರಪಟ್ಟಿಯನ್ನು ದಿನಾಂಕ 09/06/2011ರಂದು ಸಂಜೆ 5.00 ಗಂಟೆಯೊಳಗಾಗಿ ಖುದ್ದಾಗಿ ಅಥವಾ ಅಂಚೆ ಮೂಲಕ ಮೇಲೆ ತಿಳಿಸಿರುವ ನಿರ್ದೇಶಕರ ವಿಳಾಸಕ್ಕೆ ಕಳುಹಿಸುವುದು.

10. ಸೀಲು ಮಾಡಿದ ಲಕೋಟೆ ಮೇಲೆ "**ಬಾನುಲಿ ಮತ್ತು ಎಜುಸ್ಯಾಟ್ ವಾರ್ಷಿಕ ವೇಳಾಪಟ್ಟಿ ಮುದ್ರಣ ಮತ್ತು ಸರಬರಾಜಿಗಾಗಿ ದರಪಟ್ಟಿ**" ಎಂದು ನಮೂದಿಸಬೇಕು.

11. ಕಾರ್ಯಾದೇಶವನ್ನು ನೀಡಿದ 5ಸ ದಿನದೊಳಗಾಗಿ ಡಿ.ಟಿ.ಪಿ ಮಾಡಿದ 3 Proof ಗಳನ್ನು ನೀಡಿ ಅಂತಿಮ ಅನುಮೋದನೆಯನ್ನು ಪಡೆದುಕೊಳ್ಳಬೇಕು. ಅಂತಿಮ ಅನುಮೋದನೆ ಪಡೆದ ದಿನಾಂಕದಿಂದ 10 ದಿನದೊಳಗಾಗಿ ಮುದ್ರಿಸಿ ಬ್ಲಾಕ್‌ವಾರು ಬಂಡಲ್ ಮಾಡಿ ಮೇಲೆ ತಿಳಿಸಿರುವ ಕಛೇರಿಗಳಿಗೆ ಸರಬರಾಜು ಮಾಡಿ ಸಂಬಂಧಿಸಿದ ಕಛೇರಿಗಳ ಮುಖ್ಯಸ್ಥರುಗಳಿಂದ ಸಹಿ ಮಾಡಿಸಿದ Delivery Challan ಗಳನ್ನು ಈ ಕಛೇರಿಗೆ ತಲುಪಿಸಿದ ನಂತರ ಹಣ ಪಾವತಿಸಲು ಕ್ರಮಕೈಗೊಳ್ಳಲಾಗುವುದು.

ತಮ್ಮ ನಂಬುಗೆಯ,

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ

D:\p4comp27 y11-12\EDUSAT\Handbook_quo.doc